ಬಗ್ಗೆ ಕುತೂಹಲ ಹುಟ್ಟಿ ಅಲ್ಲಿಗೆ ಅವನನ್ನು ಕರೆದೊಯ್ಯುವಂತೆ ಬಾಲ್ರಾಜನನ್ನು ಕೇಳಿಕೊಂಡಿದ್ದ. ಗೆಳೆಯ ಕೇಳಿಕೊಂಡಿದ್ದರಿಂದಲೂ ತಾನು ತುಂಬಾ ವರ್ಷಗಳಿಂದ ಅದನ್ನು ನೋಡಿರದಿದ್ದರಿಂದಲೂ ಅವನನ್ನು ಅಲ್ಲಿಗೆ ಕರೆದೊಯ್ದಿದ್ದ. ಪುಟ್ಟದೊಂದು ಗುಡ್ಡದ ಮೇಲಿದ್ದ ಆ ಕೋಡ್ಗಲ್ಲು ಆ ಗೆಳೆಯನಿಗೆ ಥೇಟ್ ಶಿಲುಬೆಯಂತೆ ಕಂಡಿತ್ತು. ಅದನ್ನು ನೋಡುತ್ತಲೇ ಇದ್ದಕ್ಕಿದ್ದಂತೆ, 'ಓಹ್, ಶಿಲುಬೆ ಮಲೆ' ಅನ್ನುವ ಉದ್ಗಾರ ಹೊರಬಿದ್ದಿತ್ತು. ಹಂಗಾಗಿ, ಬಾಲ್ರಾಜನಿಗೆ ಆ ಚಣಕ್ಕೇ ಆ ಹೆಸರು ಅವನೊಳಗೆ ಇಳಿದದ್ದು ಮಾತ್ರವಲ್ಲದೆ ಅದರ ಬಗ್ಗೆ ಒಂದು ರೀತಿಯ ಮಮಕಾರ ಹುಟ್ಟಿಕೊಂಡುಬಿಟ್ಟಿತ್ತು. ತಾನು ಚಿಕ್ಕಂದಿನಿಂದ ಅದೆಷ್ಟು ಸಾರ್ತಿ ಈ ಕಲ್ಲನ್ನು ನೋಡಿದ್ದೇನೆ, ಹತ್ತಿದ್ದೇನೆ ಯಾವತ್ತೂ ಹಂಗೆ ಕಾಣದ್ದು ಇವತ್ತು ಹಿಂಗೆ ಕಾಣುತ್ತಿದೆಯಲ್ಲ ಅಂತ ಅನಿಸಿಬಿಟ್ಟಿತ್ತು ಅವನಿಗೆ. ಐದಾರು ಅಡಿ ಅಗಲಕ್ಕೂ ಎರಡಾಳಷ್ಟು ಎತ್ತರಕ್ಕೂ ಇದ್ದ ಆ ಕಲ್ಲಿನ ತುದಿಯಿಂದ ಕೆಲವು ಅಡಿಗಳ ಕೆಳಕ್ಕೆ ಅದರ ಇಕ್ಕೆಲಗಳಲ್ಲೂ ಮೂರ್ನಾಲ್ಕು ಅಡಿಯಷ್ಟು ಉದ್ದಕ್ಕೆ ಎರಡು ಕಲ್ಲುಗಳು ಎರಡು ಭುಜಗಳಂತೆ ಒಡಮೂಡಿದ್ದವು. ಹಂಗಾಗಿ, ಅದು ಎದುರಿನಿಂದ ನೋಡಿದವರಿಗೆ ಶಿಲಬೆಯಂತೇ ಕಾಣುತ್ತಿತ್ತು. ಅದನ್ನು ನೋಡುತ್ತಾ ನೋಡುತ್ತಾ ಬಾಲ್ರಾಜನೊಳಗೆ ಇನ್ನಿಲ್ಲದ ಕೌತುಕವೊಂದು ಆಡಿತ್ತು.

ಈ ಕೌತುಕ ಕೌತುಕವಾಗಷ್ಟಕ್ಕೇ ಉಳಿದಿದ್ದರೆ ಸಂಪಕ್ಕಜ್ಜಿಯಾಗಲಿ ಬಾಲ್ರಾಜನಾಗಲಿ ಆ ಪರಿಯ ದಿಗಿಲಿಗೆ ಒಳಗಾಗುವ ಪ್ರಮೆಯವೇ ಬರುತ್ತಿರಲಿಲ್ಲ. ಕೋಡ್ಗಲ್ಲಿನ ಸುತ್ತಣ ಪರಿಸರವನ್ನೂ ಅಲ್ಲಿನ ಗಿಡಮರಗಳಿಗಿರಲಿ ಗುಂಡಿಗೊಟರುಗಳಿಗೂ ಒಂಚೂರೂ ಮುಕ್ಕಾಗದಂತೆ ಹಾಗೇ ಉಳಿಸಿಕೊಂಡು ಆ ಕೋಡ್ಗಲ್ಲಿನವರೆಗೂ ಕಾಡುಗಲ್ಲಿನ ಮೆಟ್ಟಿಲ ದಾರಿಯನ್ನು ಮಾಡಿ ಅಲ್ಲಿಗೆ ಹೋದವರಿಗೆ ಕೂರುವ ಮತ್ತಿತರ ವ್ಯವಸ್ಥೆಯನ್ನು ಮಾಡಿದರೆ ಅದರ ಅಂದವೇ ಇಮ್ಮಡಿಸುತ್ತೆ ಅನ್ನುವ ಹೊಸ ತುಡಿತವೊಂದು ಬಾಲ್ರಾಜನೊಳಗಾಡಿತು. ತಗೋ ಆವತ್ತು ಸಾಯಂಕಾಲವೇ ತನ್ನ ತುಡಿತವನ್ನು ಊರಿನ ತನ್ನ ವಾರಿಗೆಯವರಿಗೆ ಹಾಗೂ ಇತರೆ ಹಿರಿಯರಿಗೆಲ್ಲಾ ತಟಾಯಿಸಿಬಿಟ್ಟಿದ್ದ. 'ಹೆಂಗಿದ್ರೂ ದೇವಸ್ಥಾನ ನೋಡಾಕೆ ಅಂತ ಜನ ಹೋದೇ ಹೋಗ್ತಾರೆ, ಹಂಗೇ ಆ ಕೋಡ್ಗಲ್ಲನ್ನೂ ನೋಡಿಕೊಂಡು ಬಂದ್ರೆ ತಪ್ಪೇನಿದೆ,' ಅಂತ ಅವರುಗಳೂ ಹೂಗುಟ್ಟಿದ್ದರು. ಮರುದಿನವೇ ಅರಣ್ಯ ಇಲಾಖೆಯವರನ್ನು ಕಂಡು ಅಲ್ಲಿಗೆ ಹೋಗುವ ಕಲ್ಲಿನ ದಾರಿ ಹೋದವರಿಗೆ ಕೂರುವ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಮುಂತಾದವುಗಳ ಬಗ್ಗೆ ಮಾತನಾಡಿ ಅವರನ್ನು ಒಪ್ಪಿಸಿದ್ದ. ಅವರ ಕೆಲವು ಷರತ್ತುಗಳಿಗೆ ಬಾಲ್ರಾಜನೂ ಒಪ್ಪಿದ್ದ. ಅದಕ್ಕೆ ತಗುಲಿದ ಖರ್ಚನ್ನೆಲ್ಲಾ ತಾನೇ ವಹಿಸಿಕೊಂಡು ಮತ್ತೊಂದಷ್ಟು ದಿನ ಊರಲ್ಲಿ ಉಳಿದು ಮುಂದೆ ನಿಂತು ಆ ಕೆಲಸಗಳನ್ನೆಲ್ಲಾ ಮಾಡಿಸಿಯೂಬಿಟ್ಟಿದ್ದ. ಹಂಗಾಗಿ ಕೋಡ್ಗಲ್ಲಿಗೆ ಹೋಗುವ ದಾರಿ ಅಲ್ಲಿ ಕೂರಲು ಬೆಂಚುಗಳು ಬೋರ್ವೆಲ್ಲೊಂದರಿಂದ ನೀರು ತುಂಬಿಸುತ್ತಿದ್ದ ಮಿನಿ ಟ್ಯಾಂಕ್ ಹಾಗೂ ಅದರ ಪಕ್ಕದಲ್ಲೇ ಕಾಡಿನ ಪ್ರಾಣಿ ಪಕ್ಷಿಗಳಿಗಾಗಿ ದೊಡ್ಡದೊಂದು ತೊಟ್ಟಿಯನ್ನು ಕಟ್ಟಿಸಲಾಗಿತ್ತು. ಜೊತೆಗೆ, ಕೋಡ್ಗಲ್ಲಿನ ಕಡೆಗೆ ಹೋಗುತ್ತಿದ್ದ ದಾರಿ ಶುರುವಾಗುತ್ತಿದ್ದ ತಿರುವಿನಲ್ಲಿ ಆಳೆತ್ತರದ ಎರಡು ಚಪ್ಪಡಿ ಕಲ್ಲುಗಳನ್ನು ನೆಟ್ಟು ಅವುಗಳ ತುದಿಗೆ ಮತ್ತೊಂದು ಅಂಥದ್ದೇ ಕಲ್ಲನ್ನು ಅಡ್ಡಲಾಗಿ ಕೂರಿಸಿ ಆ ಕಲ್ಲಿನ ಮೇಲೆ 'ಶಿಲುಬೆ ಮಲೆ' ಅಂತ ಅಕ್ಷರಗಳನ್ನೂ ಅವುಗಳ ಕೆಳಗೆ ಕೋಡ್ಗಲ್ಲಿನತ್ತ ಮುಖ ಮಾಡಿದ್ದ ಬಾಣದ ಗುರುತೊಂದನ್ನು ಕೆತ್ತಿಸಲಾಗಿತ್ತು. ಹೀಗೆ ಕೆಲವೇ ಕೆಲವು ದಿಗಳಲ್ಲಿ ಆ ಇಡೀ ಜಾಗಕ್ಕೆ ಹೊಸದೊಂದು ಖದರು ಬಂದಿತ್ತು.

ಯಾವಾಗ ಬಾಲ್ರಾಜ ಕೋಡ್ಗಲ್ಲಿನ ಬಗ್ಗೆ ಇನ್ನಿಲ್ಲದ ಮುತುವರ್ಜಿ ವಹಿಸಿದನೋ ಇಂಥ ಅವನ ಉಮೇದನ್ನು ಊರವರು ಧಾರಾಳವಾಗಿ ಇನ್ನಿತರಕ್ಕೂ ಉಪಯೋಗಿಸಿಕೊಳ್ಳಲು ಹಿಂದೇಟು ಹಾಕಲಿಲ್ಲ. ಮುಖ್ಯರಸ್ತೆಯಿಂದ ತಮ್ಮ ಹಳ್ಳಿಗೆ ತಿರುಗಿಕೊಳ್ಳುವೆಡೆಯಲ್ಲಿ ಮಹಾದ್ವಾರ ಹಾಗೂ ಊರಿನ ದೇವರು ಶಂಭುಲಿಂಗನ ಗುಡಿನ ಗೋಪುರದ ಜೀರ್ಣೋದ್ಧಾರದ ಕೆಲಸ ಹಾಗೂ